ಆ) ಪ್ರತೀ ಪ್ರಾಥಶಾಲೆಯಲ್ಲಿಯೂ ವಿದ್ಯಾರ್ಥಿಗಳಿಗೆ ಸಾಕಷ್ಟು ಸ್ಥಳಾವಕಾಶ ದೊರಕುತ್ತಿದೆಯೇ ?

ಇ) ಹಾಗಿಲ್ಲದಿದ್ದಲ್ಲಿ ಹೊಸ ಪ್ರತೀ ಶಾಲೆಗೆ ಕೊಠಡಿಗಳನ್ನು ಕಟ್ಟಲು ಕೈಗೊಂಡ ಕ್ರಮಗಳೇನು ?

ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು).—

ಅ) ಪಟ್ಟಿ ಲಗತ್ತಿಸಿದೆ.

ಆ) ಇಲ್ಲ.

ಇ) ೧೯೮೫-೮೬ರಲ್ಲಿ ಯಾವುದೇ ಹೊಸ ಶಾಲಾ ಕಟ್ಟಡಗಳ ನಿರ್ಮಾಣ ಸಾಧ್ಯವಾಗುವುದಿಲ್ಲ.

ಮಾಲೂರು ತಾಲ್ಲೂಕಿನ ಸರ್ಕಾರಿ ಪ್ರಾಥಶಾಲೆಗಳ ಪಟ್ಟಿ ವಿದ್ಯಾರ್ಥಿಗಳ ಸಂಖ್ಯೆಗಳನ್ನೊಳಗೊಂಡಂತೆ

ಕ್ರಮ ಸಂಖ್ಯೆ	ಪ್ರಾಥಶಾಲೆಯ ಹೆಸರು	ಒಟ್ಟು ವಿದ್ಯಾರ್ಥಿಗಳ ಸಂಖ್ಯೆ	ಶಾಲೆಯು ಎಲ್ಲಿ ನಡೆಯುತ್ತಿದೆ
೧.	ಸರ್ಕಾರಿ ಪ್ರಾಥಶಾಲೆ, ಲಕ್ಕೂರು	೨೬೨	ಹಿರಿಯ ಪ್ರಾಥಮಿಕ ಶಾಲೆ ಕಟ್ಟಡ ಪಾಳಿ ಪದ್ಧತಿ.
೨.	ಸರ್ಕಾರಿ ಪ್ರಾಥಶಾಲೆ, ಟೇಕಲ್	೩೮೦	ಬಾಡಿಗೆ ಕಟ್ಟಡ.
೩.	—''— ಶಿವಾರಪಟ್ಟಣ	೨೧೭	ಪಂಚಾಯ್ತಿ ಕಟ್ಟಡ.
೪.	—''— ಚಿಕ್ಕತಿರುಪತಿ	೧೦೮	ಹಿರಿಯ ಪ್ರಾಥಮಿಕ ಶಾಲೆ ಕಟ್ಟಡ, ಪಾಳಿ ಪದ್ಧತಿ.
೫.	—''— ಚಿಕ್ಕಕುಂತೂರು	೧೬೪	ಬಾಡಿಗೆ ರಹಿತ ಕಟ್ಟಡ ಸಮುದಾಯ ಕೇಂದ್ರ.
೬.	—''— ಮಾಲೂರು, ಬಾಲಕಿಯರಶಾಲೆ	೩೮೪	ಹಿ.ಪ್ರಾ.ಶಾಲೆ ಕಟ್ಟಡ ಪಾಳಿ ಪದ್ಧತಿ.
೭.	—''— ದಾರಿನಾಯಕನದೊಡ್ಡಿ	೪೮	ಛತ್ರದಲ್ಲಿ ನಡೆಯುತ್ತಿದೆ.
೮.	—''— ಕುಡಿಯನೂರು	೭೪	ಮಂಟಪದಲ್ಲಿ ನಡೆಯುತ್ತಿದೆ
೯.	ಸರ್ಕಾರಿ ಕಿರಿಯ ಕಾಲೇಜು ಮಾಲೂರು	೧೧೬೩	ಸ್ವಂತ ಕಟ್ಟಡದಲ್ಲಿ ನಡೆಯುತ್ತಿದೆ ಕೊರತೆ ಇದೆ.
೧೦.	' '' '' ಮಾಸ್ತಿ	೩೫೫	ಸ್ವಂತ ಕಟ್ಟಡದ, ಕೊರತೆ ಇದೆ.

ಕರ್ನಾಟಕದಲ್ಲಿರುವ ಗಿರಿಜನರ ವಿದ್ಯಾಪ್ರಮಾಣ

೬೫೫ (೧೫೬೧) ಶ್ರೀಮತಿ ಸುಮಾ ಪಸಂತ್ (ವೀರಾಜಪೇಟೆ).—ಮಾನ್ಯ ವಿದ್ಯಾ ಮಂತ್ರಿಗಳು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ಉತ್ತರಿಸುವರೆ :—

ಅ) ಕರ್ನಾಟಕದ ಗಿರಿಜನರಲ್ಲಿ ವಿದ್ಯಾ ಪ್ರಮಾಣ ಎಷ್ಟಿದೆ ?

ಆ) ವಿದ್ಯಾ ಪ್ರಮಾಣ ಕಡಿಮೆ ಇದ್ದಲ್ಲಿ ವಿದ್ಯಾ ಪ್ರಮಾಣವನ್ನು ಹೆಚ್ಚಿಸಲು ಸರ್ಕಾರದವರು ಕೈಕೊಂಡಿರುವ ಕಾರ್ಯಕ್ರಮಗಳೇನು ?

ಶ್ರೀ ಎಂ. ರಘುಪತಿ (ವಿದ್ಯಾಮಂತ್ರಿಗಳು).—

ಅ) ಕೇಕಡ ೨೦.೧೪.

ಆ) ೧೯೭೬–೭೭ ರಿಂದ ಯೋಜನೆಯಲ್ಲಿ ಪರಿಶಿಷ್ಟ ವರ್ಗದವರಿಗೆ ಪ್ರತ್ಯೇಕ ಉಪಯೋಜನೆಯನ್ನು ಅಳವಡಿಸಿ, ಆದರಂತೆ ನಾಲ್ಕು ಜಿಲ್ಲೆಗಳಲ್ಲಿ ಕೊಡಗು, ಮೈಸೂರು, ದಕ್ಷಿಣ ಕನ್ನಡ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಮಾತ್ರ ಯೋಜನೆಯನ್ನು ತಯಾರಿಸಲಾಗಿದೆ. ಇದಲ್ಲದೆ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದವರಿಗೆ ಸಮಾಜ ಕಲ್ಯಾಣ ಇಲಾಖೆಯಿಂದ ನೀಡುವಂತಹ ವಿದ್ಯಾರ್ಥಿವೇತನ, ಪೋಷಕರಿಗೆ ಪ್ರೋತ್ಸಾಹ ಧನ, ಹೊಲಿಕೆ, ಉಡುಪು, ಪುಸ್ತಕಗಳು ಮತ್ತು ಆಶ್ರಮ ಶಾಲೆಗಳನ್ನು ತೆರೆಯುವುದರ ಜೊತೆಗೆ, ವಿದ್ಯಾ ಇಲಾಖೆಯು ಈ ಕೆಳಕಂಡ ಯೋಜನೆಗಳನ್ನು ಜಾರಿಗೊಳಿಸಿದೆ.

೧) ಉಚಿತ ಪಠ್ಯಪುಸ್ತಕಗಳ ವಿತರಣೆ.

೨) ಮಧ್ಯಾಹ್ನದ ಉಪಹಾರ.

೩) ಶಾಲಾ ಕಟ್ಟಡಗಳನ್ನು ಕಟ್ಟಿಸುವುದು.

೪) ಪೂರ್ವ ಪ್ರಾಥಮಿಕ ಕೇಂದ್ರಗಳನ್ನು ಪ್ರಾರಂಭಿಸುವುದು.

೫) ಹಾಜರಾತಿ ವೇತನ.

ನಿಪ್ಪಾಣಿಯಲ್ಲಿ ಬಾಡಿಗೆ ಕಟ್ಟಡಗಳಲ್ಲಿರುವ ಪ್ರಾಥಮಿಕ ಶಾಲೆಗಳು

೬೫೭ (೮೩೦) ಶ್ರೀ ವೀರಕುಮಾರ್ ಎ. ಪಾಟೀಲ್ (ನಿಪ್ಪಾಣಿ).—ಮಾನ್ಯ ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ :—

ಅ) ನಿಪ್ಪಾಣಿಯಲ್ಲಿ ಬಹುತೇಕ ಸರ್ಕಾರಿ ಪ್ರಾಥಮಿಕ ಶಾಲೆಗಳು ಖಾಸಗಿ ಕಟ್ಟಡದಲ್ಲಿ ನಡೆಯುತ್ತಿದ್ದು, ಅವುಗಳು ತೀರ ಹಳೆಯದಾಗಿದ್ದು ಬೀಳುವ ಸ್ಥಿತಿಯಲ್ಲಿರುವುದು ನಿಜವೆ ?

ಆ) ಅಂತಹ ಶಾಲೆಗಳು ಖಾಸಗಿ ಮತ್ತು ಇತರೆ ಕಟ್ಟಡಗಳಲ್ಲಿ ನಡೆಯುತ್ತಿರುವ ಸಂಖ್ಯೆ ಎಷ್ಟು ?

ಇ) ಹೊಸ ಕಟ್ಟಡಗಳನ್ನು ನಿರ್ಮಾಣ ಮಾಡಲು ಸರ್ಕಾರದವರು ಕೈಗೊಂಡಿರುವ ಕ್ರಮವೇನು ?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಶಿಕ್ಷಣ ರಾಜ್ಯ ಸಚಿವರು).—

ಅ) ನಿಜ.

ಆ) ಏಳು ಶಾಲೆಗಳು.

ಇ) ಬೆಳಗಾಂ ಜಿಲ್ಲಾ ಉಪ ನಿರ್ದೇಶಕರು ನಿಪ್ಪಾಣಿಯಲ್ಲಿಯ ಕಟ್ಟಡಗಳ ಕೊರತೆಯನ್ನು ನಿವಾರಿಸಲು ಮುಖ್ಯಾಧಿಕಾರಿಗಳು ಪುರಸಭೆ ನಿಪ್ಪಾಣಿ ಇ ರಿಂದ ಪ್ರತ್ಯೇಕ ಶಾಲಾ ಕಟ್ಟಡಗಳನ್ನು ಕಟ್ಟಿಸಲು ಬೆಳಗಾಂ ವಿಭಾಗಾಧಿಕಾರಿಗಳಿಗೆ ೧೧–೮–೮೫ರಂದು ವಿನಂತಿಸಿಕೊಂಡಿದ್ದಾರೆ.

ಹಾನಗಲ್ ತಾಲ್ಲೂಕಿನ ಪ್ರಾಥಮಿಕ ಶಾಲೆಗಳಲ್ಲಿ ವಿದ್ಯಾರ್ಥಿಗಳ ಹಾಗೂ ವಯಸ್ಕರ ಸಂಖ್ಯೆ

೭೧೧ (೧೪೩೨) ಶ್ರೀ ಸಿ.ಎಂ. ಉದಾಸಿ (ಹಾನಗಲ್).—ಮಾನ್ಯ ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ವಿಷಯಗಳಿಗೆ ದಯೆಯಿಟ್ಟು ತಿಳಿಸುವರೇ:—

ಅ) ಹಾನಗಲ್ ತಾಲ್ಲೂಕಿನಲ್ಲಿ ಪ್ರಾಥಮಿಕ ಶಾಲೆಗಳಲ್ಲಿನ ವಿದ್ಯಾರ್ಥಿಗಳ ಮತ್ತು ಶಿಕ್ಷಕರ ಒಟ್ಟು ಸಂಖ್ಯೆ ಎಷ್ಟು ?

ಆ) ಸದರಿ ಶಾಲೆಗಳಲ್ಲಿ ಶಿಕ್ಷಕರ ಕೊರತೆಯಿರುವುದು ನಿಜವೇ ? ಹಾಗಿದ್ದಲ್ಲಿ ಅವರ ಸಂಖ್ಯೆ ಎಷ್ಟು ?